(6)

74

# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:–** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.

**ವಾದಿಗಳು:–** 1)ಶ್ರೀ.ವೀರಭದ್ರಶೆಟ್ಟಿ ತಂದೆ.ವೆಂಕಣ್ಣಶೆಟ್ಟಿ, ಸಾ:ಡಿ.ಅಂತಾಪುರ, ಸಂಡೂರು ತಾಲ್ಲೂಕು.
2)ಶ್ರೀ.ಶ್ರೀನಿವಾಸ ತಂದೆ.ವೆಂಕಣ್ಣಶೆಟ್ಟಿ, ಸಾ:ಡಿ.ಅಂತಾಪುರ, ಸಂಡೂರು ತಾಲ್ಲೂಕು.

**ವಿರುದ್ಧ**

**ಪ್ರತಿವಾದಿಗಳು:–** ಶ್ರೀ.ಸೋಮರಾಜ ತಂದೆ.ವೆಂಕಣ್ಣಶೆಟ್ಟಿ, ಕರಿಮಾರೆಮ್ಮ ಕಾಲೋನಿ, ಸತ್ಯವಾಣಿನಗರ, ಬಳ್ಳಾರಿ.

**ಪೀಠಿಕೆ:–**

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ತೋರಣಗಲ್ಲು | ಅಂತಾಪುರ | 127/ / | 8.99 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ–1 ಮತ್ತು ವಾದಿ–2 ಇವರುಗಳು ಅಂತಾಪುರ ಗ್ರಾಮದ ಸ.ನಂ. 127/ / ವಿಸ್ತೀರ್ಣ 8.99 ಎಕರೆ ಜಮೀನನ್ನು ನನ್ನ ತಂದೆಯಾದ ಶ್ರೀ.ಆರ್.ವೆಂಕಣ್ಣಶೆಟ್ಟಿ ಮತ್ತು ಚಿಕ್ಕಪ್ಪನಾದ ಶ್ರೀ.ಲಕ್ಷ್ಮಯ್ಯಶೆಟ್ಟಿ ಇವರುಗಳ ಹೆಸರಿಗೆ ಈಗ ಜಂಟಿ ಪಟ್ಟಾಯಿರುತ್ತದೆ. ಆದರೆ ನಮ್ಮ ತಂದೆಯಾದ ಆರ್.ವೆಂಕಣ್ಣಶೆಟ್ಟಿ ಇವರು ದಿನಾಂಕ:21–06–2010 ರಂದು ಮರಣ ಹೊಂದಿದ ಪ್ರಯುಕ್ತ ಸದ್ರಿ ಸ.ನಂ.127 ಪೈಕಿ ವಿಸ್ತೀರ್ಣ 4.50 ಎಕರೆ ಪೈಕಿ ಜಮೀನಿನ ಭಾಗಕ್ಕೆ ಬರುತ್ತದೆ. ಪ್ರಯುಕ್ತ ಶ್ರೀ.ಲಕ್ಷ್ಮಯ್ಯಶೆಟ್ಟಿ ಇವರೊಂದಿಗೆ ಜಂಟಿ ಪಟ್ಟಾ ಮಂಜೂರು ಮಾಡಲು ಭೂಮಿ ಸ್ವೀಕೃತಿ ಸಂಖ್ಯೆ 2035/2014–15 ದಿನಾಂಕ:16–01–2016 ರಲ್ಲಿ ಅರ್ಜಿಸಲ್ಲಿಸಿದ್ದು ಹಾಗೂ ವಹಿವಾಟಿನ ಸಂಖ್ಯೆ 54/2014–15 ದಿನಾಂಕ:16–01–2016 ರಲ್ಲಿ ಸಲ್ಲಿಸಿದ ಅರ್ಜಿಯನ್ನು ಗ್ರಾಮಲೆಕ್ಕಾಧಿಕಾರಿಗಳು ಅಂತಾಪುರ ಇವರು ಹಕ್ಕುಬದಲಾವಣೆ ಸಂಖ್ಯೆ ಎಂ.ಆರ್ H-29/2014-15 ರ ವಹಿಯಲ್ಲಿ ದಾಖಲಿಸಿಕೊಂಡು ಸಂಬಂಧಿಸಿದವರಿಗೆ ನಮೂನೆ–21 ನೋಟೀಸನ್ನು ಜಾರಿಗೊಳಿಸಲಾಗಿ ನಿಗದಿತ 30 ದಿನಗಳೊಳಗಾಗಿ ಸದ್ರಿ ವಿವಾದಿತ ಅಂತಾಪುರ ಗ್ರಾಮದ ಸ.ನಂ. 127/ / ವಿಸ್ತೀರ್ಣ 8.99 ಎಕರೆ ಜಮೀನು ನನ್ನ ತಂದೆಯಾದ ಶ್ರೀ.ವೆಂಕಣ್ಣಶೆಟ್ಟಿ ಮತ್ತು ನಮ್ಮ ಚಿಕ್ಕಪ್ಪನಾದ ಶ್ರೀ.ಲಕ್ಷ್ಮಯ್ಯಶೆಟ್ಟಿ ಇವರ ಹೆಸರಿಗೆ ಜಂಟಿ ಪಟ್ಟಾಯಿದ್ದು ಇವರಲ್ಲಿ ನಮ್ಮ ತಂದೆಯಾದ ಶ್ರೀ.ವೆಂಕಣ್ಣಶೆಟ್ಟಿ ಇವರ ಹಿಸ್ಸೆಗೆ 4.50 ಎಕರೆ ಬರುತ್ತದೆ. ಅದರಲ್ಲಿ ನನಗೂ ಪಾಲು ಬರುತ್ತದೆಂದು ಪ್ರತಿವಾದಿ ಶ್ರೀ.ಸೋಮರಾಜ ತಂದೆ.ವೆಂಕಣ್ಣಶೆಟ್ಟಿ ಇವರು ತಕರಾರು ಸಲ್ಲಿಸಿದ ಪ್ರಯುಕ್ತ ಮುಂದಿನ ಕ್ರಮಕ್ಕಾಗಿ ಗ್ರಾಮಲೆಕ್ಕಿಗರು ಅಂತಾಪುರ ಇವರು ದಿನಾಂಕ:20–04–2016 ರಂದು ಕಡತವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:31–03–2015 ರಂದು ನೋಟೀಸು ನೀಡಿ, ವಿಚಾರಣೆಯನ್ನು ದಿನಾಂಕ: 20–04–2015 ರಂದು ಪ್ರಾರಂಭಿಸಿ ದಿನಾಂಕ:18–04–2016 ರಂದು ಮುಕ್ತಯಗೊಳಿಸಲಾಯಿತು.

ವಾದಿ–1 ಮತ್ತು ವಾದಿ–2 ಹಾಗೂ ಇವರ ಪರವಾಗಿ ವಕೀಲರು ಹಾಜರಾಗಿ ವಿವಾದಿತ ಅಂತಾಪುರ ಗ್ರಾಮದ ಸ.ನಂ.127/ / ವಿಸ್ತೀರ್ಣ 8.99 ಎಕರೆ ಜಮೀನು ನಮ್ಮ ತಂದಯಾದ ಶ್ರೀ.ಆರ್.ವೆಂಕಣ್ಣಶೆಟ್ಟಿ ಮತ್ತು ನಮ್ಮ ಚಿಕ್ಕಪ್ಪನಾದ ಶ್ರೀ.ಲಕ್ಷ್ಮಣಶೆಟ್ಟಿ ಇವರುಗಳೊಂದಿಗೆ ಜಂಟಿ ಪಟ್ಟಾವಿದ್ದು, ಈಗ ನಮ್ಮ ತಂದೆಯಾದ ಶ್ರೀ.ಆರ್.ವೆಂಕಣ್ಣಶೆಟ್ಟಿ ಇವರು ದಿನಾಂಕ:21–06–2010 ರಂದು ಮರಣಹೊಂದಿದ್ದು, ಇವರಿಗೆ ಮೂರುಜನ ಮಕ್ಕಳಿದ್ದು (1)ವೀರಭದ್ರಶೆಟ್ಟಿ (2)ಸೋಮರಾಜ (3)ಶ್ರೀನಿವಾಸ ಇದ್ದು, ನನ್ನ ತಮ್ಮನಾದ ಹಾಗೂ ಪ್ರತಿವಾದಿಯಾದ ಸೋಮರಾಜ ಇವರು ನನ್ನ ಹತ್ತಿರ ರೂ.4,50,000–00 ತೆಗೆದುಕೊಂಡು, ಸದ್ರಿ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲವೆಂದು ಬರೆದುಕೊಟ್ಟಿರುತ್ತಾರೆ. ಪ್ರಯುಕ್ತ ಸದ್ರಿ ವಿವಾದಿತ ಆಸ್ತಿಯನ್ನು ವಾದಿ–1 ಮತ್ತು ವಾದಿ–2ರ ನೊಂದಣೆ ಹಕ್ಕುಬದಲಾವಣೆ ಮಾಡಬೇಕೆಂದು ಕೋರಿ ವಾದ ಮಂಡಿಸಿದ್ದು ಇರುತ್ತದೆ.

ಪುಟ...2ಕ್ಕೆ

72

ಪ್ರತಿವಾದಿ ಶ್ರೀ.ಸೋಮರಾಜ ತಂದೆ.ವೆಂಕಣ್ಣಶೆಟ್ಟಿ, ಕರಿಮಾರೆಮ್ಮ ಕಾಲೋನಿ, ಸತ್ಯವಾಣಿನಗರ, ಬಳ್ಳಾರಿ ಇವರು ಅಂತಾಪುರ ಗ್ರಾಮದ ಸ.ನಂ. 127/ / ವಿಸ್ತೀರ್ಣ 8.99 ಎಕರೆ ಜಮೀನು ನನ್ನ ತಂದೆಯಾದ ಶ್ರೀ.ವೆಂಕಣ್ಣಶೆಟ್ಟಿ ಮತ್ತು ನಮ್ಮ ಚಿಕ್ಕಪ್ಪನಾದ ಶ್ರೀ.ಲಕ್ಷ್ಮಯ್ಯಶೆಟ್ಟಿ ಇವರ ಹೆಸರಿಗೆ ಜಂಟಿ ಪಟ್ಟಾಯಿದ್ದು, ಇದರಲ್ಲಿ ನಮ್ಮ ತಂದೆಯಾದ ಶ್ರೀ.ವೆಂಕಣ್ಣಶೆಟ್ಟಿ ಇವರ ಹಿಸ್ಸೆಗೆ 4.50 ಎಕರೆ ಬರುತ್ತದೆ. ಅದರಲ್ಲಿ ನನಗೂ ಪಾಲುಬರುತ್ತದೆಂದು ಪ್ರತಿವಾದಿ ಮಂಡಿಸಿದ್ದು ಇರುತ್ತದೆ.

ಈ ಮೇಲಿನ ಅಂಶಗಳನ್ನು ಪರಿಶೀಲಿಸಿ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಈಕೆಳಗಿನಂತೆ ಆದೇಶಿಸಲಾಗಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/89/2014-15 ದಿನಾಂಕ:8-08-2016.

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಹಾಗೂ ನನಗೆ ಪ್ರದತ್ತವಾದ ಅಧಿಕಾರದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ನಿಯಮ 129 ಹಾಗೂ ನಿಯಮ 42 ರಂತೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯ ಅಂತಾಪುರ ಗ್ರಾಮದ ಸ.ನಂ. 127/ / ವಿಸ್ತೀರ್ಣ 8.99 ಎಕರೆ ಎಕರೆ ಜಮೀನು ಶ್ರೀ.ಆರ್.ವೆಂಕಣ್ಣಶೆಟ್ಟಿ ಇವರ ತಮ್ಮನಾದ ಶ್ರೀ.ಲಕ್ಷ್ಮಯ್ಯಶೆಟ್ಟಿ ಇವರುಗಳ ಹೆಸರಿಗೆ ಈಗ ಜಂಟಿ ಪಟ್ಟಾವಿದ್ದು, ಶ್ರೀ.ಲಕ್ಷ್ಮಣಶೆಟ್ಟಿ ಇವರ ಹೆಸರಿನೊಂದಿಗೆ ಹಾಲಿ ಪಟ್ಟಾದಾರರಾದ ಶ್ರೀ.ಆರ್.ವೆಂಕಣ್ಣಶೆಟ್ಟಿ ಇವರು ದಿನಾಂಕ:21-06-2010 ರಂದು ಮರಣ ಹೊಂದಿದ ಪ್ರಯುಕ್ತ ಇವರ ಹೆಸರು ಕಡಿಮೆ ಮಾಡಿ ಇವರ ಭಾಗಕ್ಕೆ ಬರುವ ಜಮೀನು ಪೋತಿ ವಾರಸತ್ವ ಪ್ರಕಾರ ವಾದಿ-1 ಶ್ರೀ.ವೀರಭದ್ರಶೆಟ್ಟಿ ತಂದೆ.ವೆಂಕಣ್ಣಶೆಟ್ಟಿ, ಸಾ:ಡಿ.ಅಂತಾಪುರ, ಸಂಡೂರು ತಾಲ್ಲೂಕು ವಾದಿ-2 ಶ್ರೀ.ಶ್ರೀನಿವಾಸ ತಂದೆ.ವೆಂಕಣ್ಣಶೆಟ್ಟಿ, ಸಾ:ಡಿ.ಅಂತಾಪುರ, ಸಂಡೂರು ತಾಲ್ಲೂಕು ಮತ್ತು ಪ್ರತಿವಾದಿ ಶ್ರೀ.ಸೋಮರಾಜ ತಂದೆ.ವೆಂಕಣ್ಣಶೆಟ್ಟಿ, ಬಳ್ಳಾರಿ ಇವರ ಮೂರುಜನ ಮಕ್ಕಳ ಹೆಸರಿಗೆ ಪೋತಿವಾರಸತ್ವ ಪ್ರಕಾರ ಜಂಟಿ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ತಯಾರಿಸಿ ಗಣಕೀರಣಗೊಳಿಸಿಕೊಂಡು ಪರಿಶೀಲಿಸಿ ಈ ಆದೇಶವನ್ನು ದಿನಾಂಕ: 8-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಸಂಡೂರು.
ತಹಶೀಲ್ದಾರರು, ಸಂಡೂರು
TAHASILDAR, SANDUR

ಗೆ,

(1) ವಾದಿ ಹಾಗೂ ಪ್ರತಿವಾದಿಗಳಿಗೆ (ಗ್ರಾಮಲೆಕ್ಕಾಧಿಕಾರಿ ಅಂತಾಪುರ ಮುಖಾಂತರ)
(2) ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರಿಗೆ ಸೂಕ್ತಕ್ರಮಕ್ಕಾಗಿ.
(3) ಗ್ರಾಮಲೆಕ್ಕಿಗರು ಅಂತಾಪುರ ಇವರಿಗೆ ಸೂಕ್ತಕ್ರಮಕ್ಕಾಗಿ.
(4) ಈಕಾರ್ಯಾಲಯದ ಗಣಕೀಕರಣ ವಿಭಾಗಕ್ಕೆ.